(ಸಾಕ್ಷಿಗೆ ಕನ್ನಡ ಭಾಷೆ ಬರದೇ ಇರುವ ಸಲುವಾಗಿ ತೆಲುಗು ಭಾಷೆಯಿಂದ ಕನ್ನಡ ಭಾಷೆಗೆ ತರ್ಜುಮೆ ಮಾಡಲು ಶ್ರೀಮತಿ ಪ್ರಮೀಳ ಸಹಾಯ ಸರ್ಕಾರಿ ಅಭಿಯೋಜಕರನ್ನು ಭಾಷಾಂತರಕಾರರನ್ನಾಗಿ ನೇಮಿಸಿ ಅವರಿಗೂ ಸಹ ಸತ್ಯಾಪನೆಯನ್ನು ಬೋದಿಸಲಾಯಿತು.)

ಸಾಕ್ಷಿಯನ್ನು ಪುನಃ ದಿಃ 19-04-2021 ರಂದು ಕರೆಸಿ ಪ್ರಮಾಣೀಕರಿಸಲಾಯಿತು

ಮುಂದುವರೆದ **ಮುಖ್ಯ ವಿಚಾರಣೆ:- ಮಾನ್ಯ** ಸರ್ಕಾರಿ ಅಭಿಯೋಜಕರಿಂದಃ

ಪೊಲೀಸರು ಸದರಿ ಸ್ಥಳದಿಂದ ನನ್ನ ಮಗನ ಕೈಗೆ ಕಟ್ಟಿದ್ದ ಹಗ್ಗವನ್ನು ಅಮಾನತ್ತುಪಡಿಸಿಕೊಂಡಿರುತ್ತಾರೆ, ಅದರೊಂದಿಗೆ ಮೊಬೈಲ್ ಫೋನ್ ಮತ್ತು ಒಂದು ಪತ್ರವನ್ನು ಒಂದು ಜೊತೆ ಆತನ ಚಪ್ಪಲಿ, ರಕ್ತ ಕಲೆಯಾಗಿದ್ದ ಮಣ್ಣು ಮತ್ತು ಮಾದರಿ ಮಣ್ಣನ್ನು ಅಮಾನತ್ತುಪಡಿಸಿರುತ್ತಾರೆ. ಸದರಿ ಸ್ಥಳದಲ್ಲಿ ಪೊಲೀಸರು ಭಾವ ಚಿತ್ರವನ್ನು ತೆಗೆದಿದ್ದು ನಂತರ ದಾಖಲಾತಿಗೆ ನನ್ನ ಸಹಿಯನ್ನು ಪಡೆದಿರುತ್ತಾರೆ. ಈಗ ನಾನು ಸದರಿ ವಸ್ತುಗಳನ್ನು ನೋಡುತ್ತಿದ್ದು ಅವುಗಳನ್ನು ಈಗಾಗಲೇ ಮು.ಮಾಲು 6 ರಿಂದ 8 ಹಾಗೂ 10 ಮತ್ತು 11 ಎಂದು ಗುರುತಿಸಲಾಗಿರುತ್ತದೆ ಮತ್ತು ಈಗ (ಮೊಹರಾದ ಕವರ್ ನಲ್ಲಿರುವ ಮೊಬೈಲ್ ಅನ್ನು ಹೊರತೆಗೆಯಲು ಅಭಿಯೋಜಕರು ಅನುಮತಿ ಕೋರಿದ್ದು ಅನುಮತಿಸಲಾಯಿತು.) ಸದರಿ ವಿವೋ ಮೊಬೈಲ್ ಅನ್ನು ಈಗ ನಾನು ನೋಡುತ್ತಿದ್ದು, ಅದು ನನ್ನ ಮಗನಿಗೆ ಸೇರಿದ್ದಾಗಿದ್ದು ಅದನ್ನು ಮು.ಮಾಲು 12 ಎಂದು ಗುರುತಿಸಲಾಯಿತು. ನನ್ನ ಮಗನ ಸಾವಿಗೆ ಕಾರಣರಾದ ಆರೋಪಿತರು ಈ ದಿನ ನ್ಯಾಯಾಯದ ಮುಂದೆ ಇದ್ದು ಅವರನ್ನು ನಾನು ಗುರುತಿಸಿರುತ್ತೇನೆ.

**ಪಾಟೀ ಸವಾಲು:- ಆರೋಪಿಗಳ ಪರ ಶ್ರೀ ಸಿಕೆ ವಕೀಲರಿಂದ :-**

ನನಗೆ ಕನ್ನಡ ಓದಲು, ಬರೆಯಲು ಮತ್ತು ಮಾತನಾಡಲು ಬರುವುದಿಲ್ಲ ಎಂದರೆ ಸರಿ. ನಾನು ಗುರುತಿಸಿದ ಮು.ಮಾಲುಗಳು ಸ್ಥಳದಲ್ಲಿಯೇ ಇದ್ದವು. ಮು.ಮಾಲುಗಳನ್ನು ಅಮಾನತ್ತುಪಡಿಸಿಕೊಂಡಾಗ ಎಲ್ಲಾ ವಿಚಾರಗಳನ್ನು ಬರೆದುಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ನನ್ನ ಮಗನು ನೇಣುಹಾಕಿಕೊಂಡಿದ್ದ ಸ್ಥಳದಲ್ಲಿ ಮುಳ್ಳಿನ ಪೊದೆಗಳು ಹೊಂದಿದ ಜಾಗವಾಗಿತ್ತು ಎಂದರೆ ಸರಿ. ನನ್ನ ಮಗ ನೇಣುಹಾಕಿಕೊಂಡಿದ್ದ ಮರದ ರೆಂಬೆ ಸುಮಾರು ಮೂರು ಬೆರಳಿನಷ್ಟು ದಪ್ಪ ಇತ್ತು

ಮತ್ತು ಮರ ಸುಮಾರು ಸುಮಾರು ಅರ್ಧ ಅಡಿಯಷ್ಟು ದಪ್ಪ ಇತ್ತು. ಸದರಿ ಮರದ ಬಳಿಗೆ ಹೋಗಲು ಮುಳ್ಳಿನ ಪೊದೆಗಳ ಮೂಲಕ ಹೋಗಬೇಕಾಗುತ್ತದೆ ಎಂದರೆ ಸರಿ. ನಾನು ನೋಡಿದಾಗ ನನ್ನ ಮಗನ ಶವವು ಮರದಲ್ಲಿ ನೇತಾಡುತ್ತಿತ್ತು, ಪೊಲೀಸರು ಬಂದು ಶವವನ್ನು ಕೆಳಗೆ ಇಳಿಸಿರುತ್ತಾರೆ. ಆ ಸಮಯದಲ್ಲಿ ಬಹಳಷ್ಟು ಊರಿನ ಜನರು ಇದ್ದರು ಮತ್ತು ನನಗೆ ಅವರ ಹೆಸರು ಗೊತ್ತಿರುವುದಿಲ್ಲ, ಏಕೆಂದರೆ ನಾನು ಆ ಸಮಯದಲ್ಲಿ ದುಃಖದಲ್ಲಿ ಅಳುತ್ತಿದ್ದೆ. ನಾನು ಪೊಲೀಸರಿಗೆ ಠಾಣೆಗೆ ತೆರಳಿ ಹೇಳಿಕೆ ನೀಡಿರುವುದಿಲ್ಲ. ನನ್ನ ಮಗ ಮತ್ತು ಆರೋಪಿತನ ಮಗಳು ವಿಶ್ವಾಸದಿಂದ ಇದ್ದ ಬಗ್ಗೆ ನನಗೆ ಗೊತ್ತಿರುವುದಿಲ್ಲ.

ಆರೋಪಿತರು ನನ್ನ ಮಗನನ್ನು ಸಾಯಿಸುವುದಾಗಿ ಬೆದರಿಕೆ ಹಾಕಿರುವುದಿಲ್ಲ ಎಂದರೆ ಸರಿಯಲ್ಲ. ಬೆದರಿಕೆ ಹಾಕಿದ್ದ ಬಗ್ಗೆ ನಾನು ಪೊಲೀಸರಿಗೆ ಯಾವುದೇ ದೂರನ್ನು ನೀಡಿರುವುದಿಲ್ಲ. ಆರೋಪಿತರು ಯಾವುದೇ ಬೆದರಿಕೆ ಹಾಕಿರುವುದಿಲ್ಲ ಮತ್ತು ನನ್ನ ಮಗನೇ ಜೀವನದಲ್ಲಿ ಜಿಗುಪ್ಸೆಗೊಂಡು ಸ್ವತಃ ಆತ್ಮಹತ್ಯೆ ಮಾಡಿಕೊಂಡಿರುತ್ತಾನೆ ಎಂದರೆ ಸರಿಯಲ್ಲ. ಆತನ ಸಾವಿಗೆ ಆರೋಪಿತರು ಯಾವುದೇ ರೀತಿಯಲ್ಲಿ ಕಾರಣೀಕರ್ತರಲ್ಲ ಎಂದರೆ ಸರಿಯಲ್ಲ. ನನಗೆ ನನ್ನ ಮಗನ ಮೊಬೈಲ್ ನಂಬರ್ ಆಗಲಿ, ಅದರ ಕಂಪನಿಯಾಗಲಿ ಗೊತ್ತಿರುವುದಿಲ್ಲ. ಪೊಲೀಸರು ಮಹಜರ್ ಕಾಲದಲ್ಲಿ ಅದರ ಕುರಿತು ಮಾಹಿತಿ ಬರೆದುಕೊಂಡ ಬಗ್ಗೆ ನನಗೆ ಗೊತ್ತಿರುವುದಿಲ್ಲ. ನನ್ನ ಮಗನ ಕೈಯಲ್ಲಿದ್ದ ಹಗ್ಗದ ಉದ್ದ ಮತ್ತು ದಪ್ಪದ ಬಗ್ಗೆ ಪೋಲೀಸರು ಬರೆದುಕೊಂಡ ಬಗ್ಗೆ ನನಗೆ ಖುದ್ದಾಗಿ ಗೊತ್ತಿರುವುದಿಲ್ಲ, ಆದರೆ ಪೋಲೀಸರು ಅದರ ಕುರಿತು ಬರೆದುಕೊಂಡಿದ್ದಾರೆ. ನಾನು ಆರೋಪಿತರ ವಿರುದ್ಧ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಮರುವಿಚಾರಣೆ: ಇಲ್ಲ</u>**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತಗೊಳಿಸಲಾಗಿದೆ.)**

ಓದಿ ಹೇಳಿ ಕೇಳಿ ಸರಿ ಇದೆ.

**(ಸಂತೋಷ್ ಗಜಾನನ್ ಭಟ್)**
2ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಕೋಲಾರ.